O.S. ನಂಬರಃ 78/2017

ಡಿ. ಡಬ್ಲ್ಯೂಃ 1

ದಿಃ 24-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎ.ಎನ್.ಟಿ ಇವರಿಂದಃ

ನೀವು ಯಾವ ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿಯು ರೈತಾಬಿ ಮತ್ತು ರಿಕ್ಷಾ ಚಾಲಕ ಎಂದು ನುಡಿಯುತ್ತಾರೆ. ಸ್ವಂತ ರಿಕ್ಷಾ ಇದೆಯಾ ಅಥವಾ ಬಾಡಿಗೆ ರಿಕ್ಷಾನಾ ಎಂದರೆ ಸಾಕ್ಷಿಯು ಸ್ವಂತ ರಿಕ್ಷಾ ಇರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಜನ್ಮ ದಿನಾಂಕ ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ದಿಃ11-11-1966 ಎಂದು ನುಡಿಯುತ್ತಾರೆ. ನೀವು ಎಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿಯು ಅಲಗೇರಿಯಲ್ಲಿ ಎಂದು ನುಡಿಯುತ್ತಾರೆ. ಕಳೆದು ಎಷ್ಟು ವರ್ಷಗಳಳಿಂದ ಅಲಗೇರಿಯಲ್ಲಿ ವಾಸಿಸುತ್ತಿದ್ದೀರಿ ಎಂದರೆ ಸಾಕ್ಷಿಯು ಹುಟ್ಟಿದಾಗಿನಿಂದ ಎಂದು ನುಡಿಯುತ್ತಾರೆ. ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದೀರಾ ಅಥವಾ ಬಾಡಿಗೆ ಮನೆಯಾ ಎಂದರೆ ಸಾಕ್ಷಿಯು ಸ್ವಂತ ಮನೆ ಎಂದು ನುಡಿಯುತ್ತಾರೆ. ನಿಮ್ಮ ಮನೆಯ ಯಾವ ಸರ್ವ ನಂಬರಿನಲ್ಲಿ ಇದೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಸರ್ವೆ ನಂ.144 ಕ್ಷೇತ್ರ ಅಂದಾಜು 1 ಎಕರೆ ಎಂದು ನುಡಿಯುತ್ತಾರೆ. ಶೇತಗಿ ಜಮೀನು ಆಗಿರುತ್ತದೆ. ನಿಮ್ಮ ಮನೆಯ ಮಾಲೀಕರು ಯಾರು ಎಂದರೆ ಸಾಕ್ಷಿಯು ಮೊದಲು ನನ್ನ ತಂದೆಯ ಹೆಸರಿಗೆ ಇದ್ದು, ಈಗ ನನ್ನ ತಾಯಿ ಹೆಸರಿಗೆ

ಇರುತ್ತದೆ ಎಂದು ನುಡಿಯುತ್ತಾರೆ. ಮನೆಯನ್ನು ಯಾರು ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಎಂದು ನುಡಿಯುತ್ತಾರೆ. ಸರ್ವೆ ನಂ.144 ಒಟ್ಟು ಕುಟುಂಬದ ಜಮೀನಾ ಅಥವಾ ಪ್ರತ್ಯೇಕವಾಗಿ ಆಗಿದೆಯಾ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಜಮೀನು ಎಂದು ನುಡಿಯುತ್ತಾರೆ.

2. ವಾದಿಯರ ಪರಿಚಯ ಇದೆಯಾ ಎಂದರೆ ಸಾಕ್ಷಿಯು ಪ್ರಕರಣ ದಾಖಲಿಸಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸಿದ ನಂತರ ವಾದಿಯರು ಎಲ್ಲಿಯವರು ಹಾಗೂ ಯಾವ ಕುಟುಂಬಕ್ಕೆ ಸೇರಿದವರು ಎಂದು ಚೌಕಾಸಿ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೀರಿ ಎಂದರೆ ಸಾಕ್ಷಿಯು 10 ನೇ ತರಗತಿಯವರೆಗೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಯಾವಾಗ ಮರಣಪಟ್ಟಿರುತ್ತಾರೆ ಎಂದರೆ ಸಾಕ್ಷಿಯು 2010 ನೇ ಸಾಲಿನಲ್ಲಿ ಮರಣಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದ ವ್ಯವಹಾರವನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಎಂದು ನುಡಿಯುತ್ತಾರೆ. ದಾವಾ ಜಮೀನಿನ ಸರ್ವೆ ನಂಬರು ಹಾಗೂ ಕ್ಷೇತ್ರ ಯಾವುದು ಎಂದು ಗೊತ್ತಿದೆಯಾ ಎಂದರೆ ಸಾಕ್ಷಿಯು ಸರ್ವೆ ನಂ.587/3 ಕ್ಷೇತ್ರ 17 ಗುಂಟೆ ಎಂದು ನುಡಿಯುತ್ತಾರೆ. ಗೋವಿಂದ ರಾಮಯ್ಯ ಶೆಟ್ಟಿ ಇರವರನ್ನು ನೀವೇನಾದರೂ ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರನ್ನು ಏನಾದರೂ ನೋಡಿರುತ್ತೀರಾ ಎಂದರೆ ಇಲ್ಲ ಎಂದು

ನುಡಿಯುತ್ತಾರೆ. ಗೋವಿಂದ ರಾಮಯ್ಯ ಶೆಟ್ಟಿ ಇವರನ್ನಾಗಲಿ ಅಥವಾ ಗೋವಿಂದ ಅನಂತ ಶೆಟ್ಟಿ ಇರನ್ನಾಗಲಿ ನಿಮ್ಮ ತಂದೆಯವರುಾ ಸಹ ನೋಡಿದ್ದು ಇರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಗೋವಿಂದ ಅನಂತ ಶೆಟ್ಟಿ ಇವರಿಗೆ ಎಷ್ಟು ಜನ ಹೆಂಡತಿ ಹಾಗೂ ಮಕ್ಕಳು ಇದ್ದರು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಇಬ್ಬರು ಹೆಂಡತಿಯರು ಇದ್ದು, ಅವರಿಗೆ ಯಾವುದೇ ಸಂತಾನ ಇರುವುದಿಲ್ಲ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರು ಎಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರ ಇಬ್ಬರ ಹೆಂಡತಿಯರನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ನಾಗಮ್ಮ ಇವರನ್ನು ನೋಡಿರುತ್ತೇನೆ, ಕಲ್ಯಾಣಿ ಇರವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾಗಮ್ಮ ಇವರನ್ನು ಎಲ್ಲಿ ನೋಡಿರುತ್ತೀರಿ ಎಂದರೆ ಸಾಕ್ಷಿಯು ಅಲಗೇರಿಯಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಪ್ರಪ್ರಥಮವಾಗಿ ಯಾವ ಸಾಲಿನಲ್ಲಿ ಅವರನ್ನು ನೋಡಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಬುದ್ಧಿ ಬಂದಾಗಿನಿಂದ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಮಗೆ ಯಾವ ವರ್ಷದಲ್ಲಿ ಬುದ್ಧಿ ಬಂದಿರುತ್ತದೆ ಎಂದರೆ ಸಾಕ್ಷಿಯು 19-20 ವರ್ಷಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರ ಇಬ್ಬರ ಹೆಂಡತಿಯರ ಹೆಸರು ಏನು ಎಂದರೆ ಸಾಕ್ಷಿಯು ನಾಗಮ್ಮ ಮತ್ತು ಕಲ್ಯಾಣಿ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರ ಹೆಸರಿನಲ್ಲಿ ಇದ್ದ ಯಾವುದಾದರೂ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗೋವಿಂದ ರಾಮಯ್ಯ ಶೆಟ್ಟಿ

ಇವರ ಹೆಸರಿನಲ್ಲಿ ಇದ್ದ ಯಾವುದಾದರೂ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಗೋವಿಂದ ಅನಂತ ಶೆಟ್ಟಿ ಇವರಿಗೆ ಗೋವೀಂದ ಅನಂತ ಯಾನೆ ಗೋವಿಂದ ರಾಮಯ್ಯ ಶೆಟ್ಟಿ ಎಂದು ಕರೆಯಲಾಗುತ್ತಿತ್ತು ಎಂದರೆ ಸರಿಯಲ್ಲ. ಗೋವಿಂದ ರಾಮಯ್ಯ ಶೆಟ್ಟಿ ಎನ್ನುವ ವ್ಯಕ್ತಿ ಎಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಗೋವಿಂದ ಅನಂತ ಶೆಟ್ಟಿ ಇವರ ಹೆಂಡತಿ ಕಲ್ಯಾಣಿ ಜೀವಂತ ಇದ್ದಾರಾ ಎಂದರೆ ಇಲ್ಲ ಮರಣಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 1966 ರಲ್ಲಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನೀವು ನೋಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.